ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟದ ಇಳಿಮುಖ

52 (393): ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):-

ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಇಳಿಮುಖವಾಗಿದೆ ?

ಆ) ಇದನ್ನು ಸರಿದೂಗಿಸಲು ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು ?

ಶ್ರೀ ಡಿ.ವಿ. ಚಿನ್ನಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):- -

ಅ) ಕೊಡಗು ಜಿಲ್ಲೆ ಹಾಗೂ ಪಶ್ಚಿಮ ಘಟ್ಟದ ಕೆಲವು ಪ್ರದೇಶಗಳನ್ನು ಹೊರತು ಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅಂತರ್ಜಲ ಮಟ್ಟ ಇಳಿಮುಖವಾಗುತ್ತಿರುವುದು ಕಂಡು ಬಂದಿದೆ.

ಆ) ವಿಷಮ ಪ್ರದೇಶಗಳಲ್ಲಿ ಅಂತರ್ಜಲ ಕೃತಕ ಮರುಪೂರ್ಕೆಗೆ ಹಾಗೂ ಅಂತರ್ಜಲ ಬಳಕೆಯನ್ನು ನಿರ್ಬಂಧಿಸಲು ಒಂದು ಯೋಜನೆಯನ್ನು ತರಲು ಸರ್ಕಾರವು ಉದ್ದೇಶಿಸಿದೆ.

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಅಧ್ಯಕ್ಷರೆ, ತಮ್ಮ ಉತ್ತರದಲ್ಲಿ ಕೆಲವು ಪ್ರದೇಶಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅಂತರ್ಜಲದ ಮಟ್ಟ ಇಳಿಮುಖವಾಗಿದೆ ಎಂದು ಹೇಳಿದ್ದೀರಿ. ಅತಿ ಹೆಚ್ಚಾಗಿ ಇಳಿಮುಖವಾಗಿರುವುದು ಯಾವ ಜಿಲ್ಲೆಯಲ್ಲಿ ? ಮತ್ತೆ ಈ ಬಳಕೆಯನ್ನು ನಿರ್ಬಂಧಿಸಲು ಮಾಡಿರುವ ಯೋಜನೆಗಳ ರೂಪುರೇಷೆಗಳೇನು ? ಆ ಯೋಜನೆಯ ಮುಖ್ಯ ವಿಶೇಷಗಳೇನು ?

ಶ್ರೀ ಡಿ.ವಿ. ಚಿನ್ನಪ್ಪ:- ಮಾನ್ಯ ಅಧ್ಯಕ್ಷರೆ, ಅತೀ ಕಡಿಮೆ ಇಳಿಮುಖವಾಗಿರುವುದು ಕೋಲಾರ ಎಂದು ಕಾಣುತ್ತದೆ.

ಇದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ನಿಮ್ಮ ಪ್ರಶ್ನೆಯಲ್ಲಿ ಇದು ಇಲ್ಲದೆ ಇರುವುದಕ್ಕೋಸ್ಕರ ಏಷ್ಟು ಅಡಿ ಹೋಗಿದೆ ಎನ್ನುವ ಮಾಹಿತಿ ಇಲ್ಲ. 8ನೇ ಪಂಚವಾರ್ಷಿಕ ಯೋಜನೆಯು ಅವಧಿಯಲ್ಲಿ ಜಲಮಟ್ಟ ವಿಷಮಮಟ್ಟವನ್ನು ತಲುಪುವ ತಾಲ್ಲೂಕುಗಳಲ್ಲಿ ವಿವಿಧ ಕೃತಕ ಅಂತರ್ಜಲ ಮರುಪೂರ್ಕೆಕೆ ವಿಧಾನಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಕೇಂದ್ರದ ಭೂ-ಜಲ ಮಂಡಳಿಯು ಗೌರಿಬಿದನೂರು ಮತ್ತು ಮುಳಬಾಗಿಲು ತಾಲ್ಲೂಕ್‌ಗಳಲ್ಲಿ ವಿವಿಧ ಕೃತಕ ಅಂತರ್ಜಲ ಮರುಪೂರ್ಕೆಕೆಯ ವಿಧಾನಗಳ ಒಂದು ಪ್ರಾಥಮಿಕ ಅಧ್ಯಯನವನ್ನು ಈ ವರ್ಷದಲ್ಲಿ ಕೈಗೊಂಡಿದ್ದಾರೆ. ಈ ಕಾರ್ಯಕ್ರಮವನ್ನು ವೈಜ್ಞಾನಿಕವಾಗಿ ಹಾಗೂ ತೀವ್ರವಾಗಿ ಕಾರ್ಯಗತಗೊಳಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಒಂದು ಸಂಶೋಧನೆ ಮತ್ತು ಅಭಿವೃದ್ಧಿ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಅಂತರ ನಿಯಮ ಪಾಲಿಸದ ಅನಿರ್ಬಂಧವಾಗಿ ಕೊಳವೆ ಬಾವಿಗಳು ಅಂತರ್ಜಲ ಬಳಸುವುದನ್ನು ತಡೆಹಿಡಿಯುವ ಸಲುವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ 1987ರಲ್ಲಿ ಪ್ರಸ್ತಾವನೆ ಮಾಡಲಾದ ಒಂದು ಕರಡು ಅಂತರ್ಜಲ ಶಾಸನವು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಮಧ್ಯೆ ಕೇಂದ್ರ ಸರ್ಕಾರದಿಂದ ಅಂತರ್ಜಲ ಪ್ರಾಧಿಕಾರವನ್ನು ರಚಿಸಿದ ಸಲುವಾಗಿ ಇತ್ತೀಚೆಗೆ ಒಂದು ಮಾದರಿ ಅಂತರ್ಜಲ ಶಾಸನ ಕರಡು ಕಳುಹಿಸಲಾಗಿದ್ದು ಇದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಕೇಂದ್ರ ಸರ್ಕಾರದಿಂದ ಒಂದು ಸುತ್ತೋಲೆ ಬಂದಿದೆ. Throughout the state and thorought India

ಒಂದೇ ತರಹ ಅಂತರ್ಜಲದ ಬಗ್ಗೆ ಒಂದು ನಿಯಮವನ್ನು ತೆಗೆದುಕೊಳ್ಳಬೇಕೆಂದು ಬಂದಿದೆ. ಲಭ್ಯವಿರುವ ಅಂತರ್ಜಲ ಸಂಪನ್ಮೂಲವನ್ನು ಪ್ರಮಾಣಿಕವಾಗಿ ಬಳಸುವಂತೆ ನೋಡಿಕೊಳ್ಳುವುದಕ್ಕೆ ಸರ್ಕಾರವು ಸಣ್ಣ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ಮುಂದೆ ಕೇಂದ್ರೀಯ ಭೂಜಲ ಮಂಡಲಿಯು ಕೋಲಾರ ಜಿಲ್ಲೆಯಲ್ಲಿ ಎರಡು ತಾಲ್ಲೂಕ್‌ಗಳು ಅಂದರೆ ಗೌರಿಬಿದನೂರು ಮತ್ತು ಮುಳಬಾಗಿಲಿನಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ಅಧ್ಯಯನವನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದು ಈಗಾಗಲೇ ವಿವಿಧ ಕೃತಕ ಮರು ಪೂರೈಕೆಯ ವಿಧಾನಗಳ ಅನುಷ್ಠಾನದ ಬಗ್ಗೆ ಪೂರ್ವಭಾವಿ ಸಮೀಕ್ಷೆಯನ್ನು ಗೌರಿಬಿದನೂರು ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿದೆ. ಮಳೆ ಬಂದಂತಹ ನೀರನ್ನು ಎತ್ತರವಾದ ಸ್ಥಳದಲ್ಲಿ ಶೇಖರಿಸಿಟ್ಟು ಆ ನೀರು ನೆಲದೊಳಗೆ ಹೋಗಿ ಕೆಳಭಾಗದಲ್ಲಿರತಕ್ಕಂಥ ಜನರಿಗೆ ಆ ನೀರನ್ನು ಉಪಯೋಗಿಸತಕ್ಕಂಥ ಪ್ರಯೋಜನವಾಗುತ್ತದೆ. ಈ ರೀತಿಯಾದ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:- ಅಧ್ಯಕ್ಷರೇ, ಕೃತಕ ಮರುಪೂರೈಕೆಗೆ ಅಂದರೆ ರೀ ಚಾರ್ಜಿಂಗ್ ಆಫ್ ವಾಟರ್ ಕೇಂದ್ರ ಸರ್ಕಾರದವರು ಒಂದು ಮಾಡಲ್ ಅನ್ನು ಎಲ್ಲಾ ಸರ್ಕಾರಕ್ಕೂ ಕಳುಹಿಸಿ ಕೊಟ್ಟಿದ್ದಾರೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕೆಳಮಟ್ಟಕ್ಕೆ ಹೋಗಿರುವುದಕ್ಕೆ ಕಾರಣವೇನೆಂದರೆ 300-400-500 ಅಡಿಗಳ ಕೆಳಗಡೆ ಹೋಗಿದೆ. ಎರಡನೆಯದು ಬೋರ್‌ವೆಲ್ ತೆಗೆಸುವವರು ಹಣ ಹೆಚ್ಚಾಗಿರುವವರು 400-500 ಅಡಿಗೆ ಹೋಗುತ್ತಾರೆ. ಬಡವರು ಪಾಪ 200-250 ಅಡಿಗಳಿಗೆ ಹೋಗುತ್ತಾರೆ. ಜೊತೆಗೆ ಅಕ್ಕಪಕ್ಕದಲ್ಲಿಯೇ ಹಾಕಿರುತ್ತಾರೆ ಅಂತಹ ಸಮಯದಲ್ಲಿ ಏನು ಮಾಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಒಂದು ಆಕ್ಟ್ ಇದೆ. ಕನಿಷ್ಠ 1000 ಅಡಿ ಅಥವಾ 500 ಅಡಿ ದೂರ ದೂರ ಇರಬೇಕೆಂದು ಇದೆ.

ಶ್ರೀ ಡಿ.ಎ. ಚಿನ್ನಪ್ಪ:- ಕನಿಷ್ಠ 225 ಅಡಿ ಆಮೇಲೆ 600 ಅಡಿ ಒಂದು ಕೊಳವೆ ಬಾವಿಗೂ ಇನ್ನೊಂದು ಕೊಳವೆ ಬಾವಿಗೂ ಇರಬೇಕು. ತೆರೆದ ಬಾವಿಗಳಲ್ಲಿ ಆರು ಅಡಿ ಡಿಸ್ಟೆನ್ಸ್ ಇರಬೇಕು.

SRI M.V. VENKATAPPA:- Too much exploitation of underground water ಒಂದು ಕಂಟ್ರೋಲ್ ಜಿಲ್ ಅಂತ ಹೇಳಿ ಕೇಂದ್ರ ಸರ್ಕಾರದವರು ಕಳುಹಿಸಿಕೊಟ್ಟಿದ್ದಾರೆ. ಆ ಬಿಲ್ಲನ್ನು ತಂದರೆ ಅನೇಕ ರೈತರಿಗೆ ಅನುಕೂಲವಾಗುತ್ತದೆ. ಆ ಬಿಲ್ಲನ್ನು ಯಾವಾಗ ತರುತ್ತೀರಿ ?

ಶ್ರೀ ಡಿ.ಎ. ಚಿನ್ನಪ್ಪ:- ಆದಷ್ಟು ಬೇಗ ತರುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸ್ಮಶಾನಗಳಿಲ್ಲದೆ ಜನರು ತೊಂದರೆ ಪಡುತ್ತಿರುವುದು

130 (761): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸ್ಮಶಾನಗಳಿಲ್ಲದೆ ಜನರು ತೊಂದರೆ ಪಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಶವಾಗಾರಗಳನ್ನು ತೆರೆಯಲು ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.